# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 15 |
| ಸದಸ್ಯರ ಹೆಸರು | : | **ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | 04.12.2023 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆಹಾರ ಸುರಕ್ಷತಾ ನಿಯಮಗಳೇನು; ಅದನ್ನು ಜಾರಿಗೊಳಿಸುವ ಅಥವಾ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವ ಆರೋಗ್ಯ ಇಲಾಖೆಯಲ್ಲಿ ಅದಕ್ಕಾಗಿಯೇ ಇರುವ ಅಧಿಕಾರಿ ಸಿಬ್ಬಂದಿಗಳು ಯಾರು; (ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಮೋದಿತ ಹಾಗೂ ಪ್ರಸ್ತುತವಾಗಿ ಇರುವ ಒಟ್ಟು ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆಗಳ ಸಹಿತ ವಿವರ ನೀಡುವುದು) | ರಾಜ್ಯದಲ್ಲಿ ಆಹಾರ ಸುರಕ್ಷತಾ ನಿಯಮಗಳು: ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006, ಮತ್ತು ನಿಯಮಗಳು 2011ರ ನಿಯಮಗಳನ್ನು ಜಾರಿಗೊಳಿಸುವ ಅಥವಾ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಜಿಲ್ಲಾ ಅಂಕಿತಾಧಿಕಾರಿಗಳು ಮತ್ತು ಆಹಾರ ಸುರಕ್ಷತಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.<br><br>ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಮೋದಿತ ಹಾಗೂ ಪ್ರಸ್ತುತ ಇರುವ ಒಟ್ಟು ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ. |
| ಆ) | ರಾಜ್ಯದಲ್ಲಿ ಹೋಟೆಲ್/ಕ್ಯಾಂಟೀನ್/ರಸ್ತೆ ಬದಿಯಲ್ಲಿ ಮಾರಾಟ ಮಾಡಲು ಆಹಾರ ಪದಾರ್ಥಗಳ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವ ವ್ಯವಸ್ಥೆಯಿದೆಯೇ; ವಿವಿಧ ಆಹಾರ ಮಳಿಗೆಗಳಲ್ಲಿ ತಯಾರಿಸಿ ಮಾರಾಟ ಮಾಡುವ ಆಹಾರ ಪದಾರ್ಥಗಳಲ್ಲಿ ಬಳಸುವ ಎಣ್ಣೆಯ ಮತ್ತಿತರ ಸಾಮಾಗ್ರಿಗಳ ಗುಣಮಟ್ಟ ಪರಿಶೀಲಿಸುವ ಹಾಗೂ ನಿಷೇಧಿತ/ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳನ್ನು ಬಳಸದಿರುವ ಬಗ್ಗೆ ಖಾತರಿಪಡಿಸುವಲ್ಲಿ ಇರುವ ವ್ಯತ್ಯಾಸಗಳೇನು; ಈ ಕುರಿತು ಚಾಲ್ತಿಯಲ್ಲಿರುವ ನಿಯಮಗಳೇನು; (ವಿವರ ನೀಡುವುದು) | ರಾಜ್ಯದಲ್ಲಿ ಹೋಟೆಲ್ /ಕ್ಯಾಂಟೀನ್/ರಸ್ತೆ ಬದಿಯಲ್ಲಿ ಮಾರಾಟ ಮಾಡಲು ಆಹಾರ ಪದಾರ್ಥಗಳ ಗುಣಮಟ್ಟವನ್ನು ನಿಯಮಿತವಾಗಿ ಪರೀಕ್ಷಿಸುವ ವ್ಯವಸ್ಥೆ ಇದೆ.<br><br>ವಿವಿಧ ಆಹಾರ ಮಳಿಗೆಗಳಲ್ಲಿ ತಯಾರಿಸಿ ಮಾರಾಟ ಮಾಡುವ ಆಹಾರ ಪದಾರ್ಥಗಳಲ್ಲಿ ಬಳಸುವ ಎಣ್ಣೆಯ ಮತ್ತಿತರ ಸಾಮಾಗ್ರಿಗಳ ಗುಣಮಟ್ಟ ಪರಿಶೀಲಿಸುವ ಕುರಿತಂತೆ ಹಾಗೂ ನಿಷೇಧಿತ/ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳನ್ನು ಬಳಸದಿರುವ ಬಗ್ಗೆ ಖಾತರಿಪಡಿಸಿಕೊಳ್ಳಲು ಆಹಾರ ಸುರಕ್ಷತಾಧಿಕಾರಿಗಳು ಸಂಬಂಧಿಸಿದ ಉದ್ದಿಮೆ/ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಅನುಮಾನಾಸ್ಪದವಾದ ಆಹಾರ ಮಾದರಿಗಳನ್ನು ಸಂಗ್ರಹಿಸಿ ಎಫ್‌ಎಸ್‌ಎಸ್‌ಎಐ ಅನುಮೋದಿತ ರಾಜ್ಯದ ಆಹಾರ ಪ್ರಯೋಗಾಲಯಗಳಿಗೆ ಕಳುಹಿಸಿ ಗುಣವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ.<br><br>ವಿಶ್ಲೇಷಣಾ ಫಲಿತಾಂಶದ ಆಧಾರದಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರನ್ವಯ ಕ್ರಮಜರುಗಿಸಲಾಗುತ್ತಿದೆ. |
| ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕಲಬೆರಕೆ ಆಹಾರ, ಆಹಾರ ಸಾಮಾಗ್ರಿ ಪತ್ತೆಯಾಗಿರುವ ಪ್ರಕರಣಗಳೆಷ್ಟು; ಸದರಿ ಪ್ರಕರಣಗಳಲ್ಲಿ ಸರ್ಕಾರ ಜರುಗಿಸಿದ ಕ್ರಮಗಳೇನು; ಆಹಾರ ಕಲಬೆರಕೆಯನ್ನು ತಡೆಯಲು ಹಾಗೂ ಸಾರ್ವಜನಿಕರಿಗೆ ಅಗತ್ಯ | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕಲಬೆರಕೆ ಆಹಾರ, ಸಾಮಾಗ್ರಿ ಪತ್ತೆಯಾಗಿರುವ ಪ್ರಕರಣಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br><br>ಆಹಾರ ಕಲಬೆರಕೆಯನ್ನು ತಡೆಯಲು ಕಲಬೆರಕೆ ಆಹಾರ ಪದಾರ್ಥಗಳನ್ನು ತಯಾರಕರು ಮತ್ತು ಮಾರಾಟ |

| | | |
|---|---|---|
| | ಮಾಹಿತಿ ನೀಡುವ ಸರ್ಕಾರ ಕೈಗೊಂಡ ಕ್ರಮಗಳೇನು; ಇದಕ್ಕಾಗಿ ಅಗತ್ಯವಿರುವ ತಾಂತ್ರಿಕತೆ, ನೈಪುಣ್ಯತೆಯಿರುವ ಎಷ್ಟು ಅಧಿಕಾರಿ/ಸಿಬ್ಬಂದಿಗಳು ಇದ್ದಾರೆ; (ವಿವರ ನೀಡುವುದು) | ಮಾಡುವವರ ಮೇಲೆ ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯ ಹಾಗೂ JMFC ನ್ಯಾಯಾಲಯಗಳಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರನ್ವಯ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಆಹಾರ ಸುರಕ್ಷತೆ ಮತ್ತು ಗುಣಮಟ್ಟದ ಬಗ್ಗೆ ಸಾರ್ವಜನಿಕರಿಗೆ ಅಗತ್ಯ ಮಾಹಿತಿ ನೀಡಲು ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.<br><br>ತಾಂತ್ರಿಕತೆ, ನೈಪುಣ್ಯತೆಯಿರುವ ಅಧಿಕಾರಿ/ಸಿಬ್ಬಂದಿಗಳ ವಿವರ ಅನುಬಂಧ-1ರಲ್ಲಿ ನೀಡಲಾಗಿದೆ. |
| ಈ) | ಆಹಾರ ಪೊಟ್ಟಣ ಸಾಮಾಗ್ರಿಗಳ ಮೂಲಕ ಮತ್ತು ತೆರೆದ ಕಂಟೇನರ್‌ಗಳ ಮೂಲಕ ಸರಬರಾಜಾಗುತ್ತಿರುವ ಆಹಾರ ಖಾದ್ಯ ತೈಲ, ವನಸ್ಪತಿ ಮತ್ತಿತರ ಪೊಟ್ಟಣಗಳ ಮೂಲಕ ವಿತರಣೆಯಾಗುವ ಸಿದ್ಧ ಆಹಾರ ವಸ್ತುಗಳ ಮತ್ತು ಆಹಾರ ಸಾಮಾಗ್ರಿಗಳ ಕಲಬೆರಕೆ ತಡೆಯುವ ಹಾಗೂ ನಿಯಂತ್ರಿಸುವ ವಿಧಿ ವಿಧಾನಗಳು ಯಾವುವು? (ವಿವರ ನೀಡುವುದು) | ಆಹಾರ ಪೊಟ್ಟಣ ಸಾಮಾಗ್ರಿಗಳ ಮೂಲಕ ಮತ್ತು ತೆರೆದ ಕಂಟೇನರ್‌ಗಳ ಮೂಲಕ ಸರಬರಾಜಾಗುತ್ತಿರುವ ಆಹಾರ ಖಾದ್ಯ ತೈಲ, ವನಸ್ಪತಿ ಮತ್ತಿತರ ಪೊಟ್ಟಣಗಳ ಮೂಲಕ ವಿತರಣೆಯಾಗುವ ಸಿದ್ಧ ಆಹಾರ ವಸ್ತುಗಳ ಮತ್ತು ಆಹಾರ ಸಾಮಾಗ್ರಿಗಳ ಕಲಬೆರಕೆ ತಡೆಯುವ ಹಾಗೂ ನಿಯಂತ್ರಿಸಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರಲ್ಲಿ ನಿಗಧಿಪಡಿಸಲಾದ ವಿಧಿ ವಿಧಾನಗಳನ್ನು ಅನುಸರಿಸಲಾಗುತ್ತಿದೆ. |

**ಕಡತ ಸಂಖ್ಯೆ: ಆಕುಕ 78 ಎಸ್.ಬಿ.ವಿ. 2023**

2/12

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

Annexure-1

## Food Safety and Standards Department

| | | Designated officers | | | Food Safety Officers | | |
|---|---|---|---|---|---|---|---|
| Sl No | District | Santioned | Working | Vacant | Santioned | Working | Vacant |
| 1 | Bagalkote | 1 | 0 | 1 | 6 | 3 | 3 |
| 2 | Bangalore Urban | 1 | 1 | 0 | 4 | 3 | 1 |
| 3 | Bangalore Rural | 1 | 0 | 1 | 4 | 1 | 3 |
| 4 | Belagavi | 1 | 1 | 0 | 11 | 5 | 6 |
| 5 | Bellary | 1 | 1 | 0 | 4 | 0 | 4 |
| 6 | Bidar | 1 | 1 | 0 | 5 | 5 | 0 |
| 7 | Vijayapura | 1 | 1 | 0 | 5 | 2 | 3 |
| 8 | Chamarajnagar | 1 | 0 | 1 | 4 | 1 | 3 |
| 9 | Chikkaballapur | 1 | 0 | 1 | 6 | 0 | 6 |
| 10 | Chickamagaluru | 1 | 1 | 0 | 7 | 3 | 4 |
| 11 | Chitradurga | 1 | 1 | 0 | 6 | 0 | 6 |
| 12 | Dakishna Kannada | 1 | 1 | 0 | 6 | 0 | 6 |
| 13 | Davanagere | 1 | 1 | 0 | 6 | 3 | 3 |
| 14 | Dharward | 1 | 1 | 0 | 5 | 0 | 5 |
| 15 | Gadag | 1 | 0 | 1 | 5 | 2 | 3 |
| 16 | Kalaburgi | 1 | 1 | 0 | 8 | 6 | 2 |
| 17 | Hassan | 1 | 0 | 1 | 8 | 2 | 6 |
| 18 | Haveri | 1 | 0 | 1 | 7 | 5 | 2 |
| 19 | Kodagu | 1 | 1 | 0 | 3 | 1 | 0 |
| 20 | Kolar | 1 | 1 | 0 | 5 | 0 | 5 |
| 21 | Koppal | 1 | 1 | 0 | 4 | 3 | 1 |
| 22 | Mandya | 1 | 1 | 0 | 7 | 6 | 1 |
| 23 | Mysore Rural | 1 | 1 | 0 | 7 | 4 | 3 |
| 24 | Raichur | 1 | 1 | 0 | 5 | 4 | 1 |
| 25 | Ramanagar | 1 | 1 | 0 | 4 | 0 | 4 |
| 26 | Shimoga | 1 | 0 | 1 | 7 | 1 | 6 |
| 27 | Tumkur | 1 | 1 | 0 | 11 | 1 | 10 |
| 28 | Udupi | 1 | 0 | 1 | 3 | 0 | 3 |
| 29 | Uttarakannada | 1 | 0 | 1 | 11 | 1 | 10 |
| 30 | Vijayanagara | 1 | 0 | 1 | 5 | 0 | 5 |
| 31 | Yadagiri | 1 | 0 | 1 | 3 | 3 | 0 |
| 32 | BBMP East | 1 | 1 | 0 | 5 | 4 | 1 |
| 33 | BBMP West | 1 | 1 | 0 | 5 | 5 | 0 |
| 34 | BBMP North | 1 | 1 | 0 | 5 | 5 | 0 |
| 35 | BBMP South | 1 | 1 | 0 | 5 | 5 | 0 |
| 36 | Palike | 1 | 1 | 0 | 3 | 3 | 0 |
| 37 | HDMC | 1 | 1 | 0 | 3 | 3 | 0 |
| 38 | DC Admin | | | | 1 | 1 | P |
| 39 | DC Squad | | | | 1 | 0 | 1 |
| | Total | **37** | **25** | **12** | **210** | **91** | **117** |

Scanned by CamScanner

# ಅನುಬಂಧ–2

## ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಕಲಬೆರಕೆ ಆಹಾರ, ಆಹಾರ ಸಾಮಾಗ್ರಿ ಪತ್ತೆಯಾಗಿರುವ ಪ್ರಕರಣಗಳ ವಿವರಗಳು

| ಕ್ರ ಸಂ. | ವರ್ಷ | ಪತ್ತೆಯಾದ ಕಲಬೆರಕೆ/ಗುಣಮಟ್ಟಕ್ಕೆ ಸಂಬಂಧಿಸಿದ ಪ್ರಕರಣಗಳು | ADC ನ್ಯಾಯಾಲಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ | JMFC ನ್ಯಾಯಾಲಯಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ |
|---|---|---|---|---|
| 1 | 2020-21 | 198 | 151 | 47 |
| 2 | 2021-22 | 509 | 466 | 43 |
| 3 | 2022-23 | 229 | 154 | 75 |
| ಒಟ್ಟು | | **936** | **771** | **165** |

24/11/23

Scanned by CamScanner